Regd No B G 155 Sri 19—4—1965

ಸತ್ಯವಾದಿ

48 th Year
Satyavadi
DAILY
MYSORE 4

ಪ್ರಾರಂಭದಲ್ಲಿ — ಆಚಾರ್ಯ ಬಸ್ತೀವಾರ್ ಎಂ ಎ ರಂಗನಾಥರು ಸಂಪಾದಕರು — ಧರ್ಮಪ್ರಜಾವಾಚಕ ಎಂ ಎಸ್ ಕೃಷ್ಣಂಕಾವ್ 2ಪೈಸೆ

ಖೈದಿ ಗ್ರಂಥಕರ್ತರು

ಲಂಡನ್— ಬ್ರಿಟನಿನ ಜೈಲುಗಳಲ್ಲಿರುವ ಖೈದಿಗಳು ಆಲ್ಲಿ ಪುಸ್ತಕಗಳನ್ನು ಒಕೆದು ಬಿಡುಗಡೆ ನಂತರ ಪ್ರಕಟಿಸಲು ಅನುಮತಿ ಕೊಡಲಾಗಿದೆ.

ಕೆಲಸ ಕಳೆದ ಕೊಂಡಜ್ಜಿಅಗಸಾಲಿಗರು

ಬೆಂಗಳೂರು— ಕೆಲಸ ಕಳೆದುಕೊಂಡ ಅಗಸಾಲಿಗರ ಪುನರ್ವಸತಿಗೆ 3.72 ಲಕ್ಷ ರೂಗಳ ವ್ಯವಸಾಯ ಸ್ವಾಸ್ಥ್ಯ ಸ್ಥಾಪಿಸುವ ವಿಷಯವನ್ನು ಭಾರತ ಸರಕಾರ ಅನುಮೋದಿಸಿದೆ : ಈ ಸ್ವಾಸ್ಥ್ಯವನ್ನು ಜಾಮಂತರಜನಗರ ತಾಲ್ಲೂಕಿನ 235 ಎಕ್ರೆ ಸ್ಥಳದಲ್ಲಿ ಸ್ಥಾಪಿಸಲಾಗುವುದು : ಇಲ್ಲಿ 59 ಸಂಸಾರಂಗಳಿಗೆ ಪುನರ್ವಸತಿ ನೀಡಲಾಗುತ್ತೆ : ಕಲಸ ಕಳೆದುಕೊಂಡ ಅಗಸಾಲಿಗರಿಗೆ ವ್ಯಕ್ತಿಗತವಾಗಿ ಚಿಕ್ಕ ವ್ಯಾಪಾರ ಮತ್ತು ಗುಡಿಕೈಗಾರಿಕೆ ಸ್ಥಾಪಿಸಿಕೊಳ್ಳಲು 16 ಲಕ್ಷ ರೂಗಳನ್ನು 16 ಲಕ್ಷ ರೂಗಳನ್ನು ಕಳೆದ ತಿಂಗಳು ಭಾರತ ಸರಕಾರ ಮಂಜೂರ್ಮಾಡಿತ್ತು.

ಪಂಚಾಂಗ ಸ್ವೀಕಾರ

ಜ್ಯೋತಿಷ ಧರ್ಮಶಾಸ್ತ್ರ ವಿದ್ವಾಂಸ ಶ್ರೀ ನ ಕೃಷ್ಣಜೋಯಿಸರಿಂದ ಗುಣಿಸಲ್ಪಟ್ಟು, ದೈವಜ್ಞಶಿಖಾಮಣಿ ಇತ್ಯಾದಿ ಬಿರುದಾಂಕಿತರಾದ ಶ್ರೀ ಸಂಪತ್ಕೃಷ್ಣ ಜೋಯಿಸರಿಂದ ಪರಿಶೋಧಿಸಲ್ಪಟ್ಟಿರುವ ಶ್ರೀ ವಿಶ್ವಾವಸು ಸಾವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಸಾದರವಾಗಿ ಸ್ವೀಕರಿಸಿದ್ದೇವೆ ; ಅನೇಕ ಜ್ಯೋತಿಷ್ಯ ವಿಷಯಗಳು, ಗ್ರಹಣ ವಿಚಾರ, ಶುಭ ಕಾರ್ಯಗಳಿಗೆ ಕಾಲಗಳು, ರಾಶಿಗಳ ಗೋಚಾರ ಫಲ, ಇತ್ಯಾದಿಗಳಿದ್ದು ಅತಿ ಉಪಯುಕ್ತವಾಗಿದೆ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟೋತ್ತರಮಹಾವಿದ್ವಾನ್ ಧರ್ಮಾಧಿಕಾರಿ
ಲಂಡಕಾರ್ಯಾಧ್ಯಕ್ಷ, ಜ್ಯೋತಿರ್ವಿದ್ಯಾಸ್ಥಾಪಕ
ಸಂಪತ್ಕೃಷ್ಣಜೋಯಿಸರಿಂದ

20 ಮಂಗಳವಾರ ಪಂಚಮಿ ಜ್ಯೇಷ್ಠ

ರಂಗುರಂಗು ಸೀರೆ ಮತ್ತು ಪಸ್ತ್ರಗಳು

ನನ್ನ ದೇಶದ ರಂಗುರಂಗಿನ ಸೀರೆಗಳನ್ನೂ ಮತ್ತು ವಸ್ತ್ರಗಳನ್ನೂ ಸುಂದರಾಯುವತಿಯರು ಧರಿಸಿದ್ದ ಪ್ರದರ್ಶನವೊಂದನ್ನು ಬೊಂಬಾಯಿಯ ಶಿಲ್ಪ ಕೇಂದ್ರದವರು ಏರ್ಪಡಿಸಿದ್ದರು

ಕಾಶ್ಮೀರದಿಂದ ಕಾಂಜೀವರಂವರೆಗೂ, ವಿಹಾರಾಂತಸ್ಪ್ರದೇಶದಿಂದ ಮಣಿಪುರದವರೆಗೂ ಅಯಾಯ ಪ್ರದೇಶದ ಸುಂದರಾಯ ಉಡುಪನ್ನು ಧರಿಸಿದ್ದ ಯುವತಿಯರು ಅಸಂಖ್ಯಾತವಾಗಿ ನೆರೆದಿದ್ದ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡರು: ಮಹಾರಾಷ್ಟ್ರದ ೨೫ ಗಜದ ಸೀರೆಯಿಂದ ಹಿಡಿದ, ಮದರಾಸಿನ ಧಂತನಾಟ್ಯದ ಉಡುಪಿನ ವರೆಗೂ, ಮತ್ತು ಗುಜರಾತಿನ ಗಾಗ್ರಾ ಮತ್ತು ಮಣಿಪುರ ನರ್ತನದ ಉಡಪುಗಳು, ಹೀಗೆ ಭಾರತದ ಎಲ್ಲ ಭಾಗಗಳಿಂದಲೂ ಬಳಕೆಯಲ್ಲಿರುವ ವಸ್ತ್ರಗಳನ್ನು ಧರಿಸಿ ನಡೆಸಿದ ಪ್ರದರ್ಶನವು ಕಣ್ಣಿಗೆ ಮೋಡಿತ್ತು: ಇದರ ಜತೆಗೆ ಅದಿ ಪಾಶ್ಚಾತ್ಯರ ಉಡುಗೆಗಳ ಪ್ರದರ್ಶನವೂ ಏರ್ಪಟ್ಟಿತ್ತು : ಭಾರತೀಯ ಬಟ್ಟೆಗಳಿಂದ ತಯಾರಾದ ಪಾಶ್ಚಾತ್ಯ ವಾದರಿಯ ಬಟ್ಟೆಗಳು ಬಹಳ ಆಕರ್ಷಣೀಯವಾಗಿ ಪ್ರದರ್ಶಿಸಲಾಗಿತ್ತು : ಈ ಪ್ರದರ್ಶನವು ಅಲ್ಲಿ ಬಂದಿದ್ದ ಸಕಲ ಪ್ರೇಕ್ಷಕರ ಮನಸ್ಸನ್ನೂ ಸೂರೆಗೊಂಡಿತು. (ಯೂ ಪಿ ಎಸ್)

ಹೆಂಡತಿಯು ಆಹುತಿ

ಫೆರಿಡಲ್ಫಿಯ— ವೊನ್ನೆ ರಾತ್ರಿ ತನ ತಿಶುವಿಗೆ ಹಾಲು ಕಾಯಿಸುತ್ತಿದ್ದ ತನ್ನ ಹೆಂಡತಿಗೆ ಲಾತೆನ್ನನೆಂಬ ಟೆಲಿಫೋನು ಗುಂಡು ಹಾರಿಸಲು ಅವಳು ಪತ್ರಳು; ಆ ಹೆಂಗಸು ಹಾಲು ಕಾಯಿಸುತ್ತಿದ್ದ ಕೆಲಪಡಿಯಲ್ಲಿ ಹಿಂದೆ ಕಳ್ಳತನವಾಗಿತ್ತೆಂದೂ, ಈಗ ಅಲ್ಲಿಂದ ಶಬ್ದಬಂದು ಕಳ್ಳರೆಂದು ನಂಬಿ ಗುಂಡುಹಾರಿಸಿದೆನೆಂದೂ ಗಂಡನು ಹೇಳಿದನು

ಹಿಂದೀ ಪ್ರಚಾರಕ್ಕೆ ಕಾರ್ಯಗಳು

ತಿರುಪತಿ— ಮೈಸೂರು ಗವರ್ನರರು ಶ್ರೀ ವಿ ವಿ ಗಿರಿಯವರು ಮೊನ್ನೆ ತಿರುಪತಿ ದೇವಾಲಯಕ್ಕೆ ಭೇಟಿ ಕೊಟ್ಟು ಶ್ರೀ ವೆಂಕಟೇಶ್ವರಸ್ವಾಮಿಗೆ ಪೂಜೆ ನೆರವೇರಿಸಿದರು.

ಮಾಸ್ಕೋ— ರಷ್ಯಾದಲ್ಲಿ ಈಗ 15೦೦೦೦೦೦ ಗೂ ಹೆಚ್ಚು ಟೆಲಿವಿಜನ್ ಸೆಟ್ಟುಗಳಿವೆಯೆಂದೂ, 500 ಟೆಲಿವಿಜನ್ ಪ್ರಾಸ್ಪಮಿಟಿಂಗಳಿವೆಯೆಂದೂ ವರದಿ ಬಂದಿದೆ

ಸದಬೆಹಲಿ— ವಿಶ್ವಸಂಸ್ಥೆಯಲ್ಲಿ ಸೆಪ್ಟಂಬರಿನಲ್ಲಿ ನಡೆಯುವ ಅದು 20 ನೇ ವಾರ್ಷಿಕೋತ್ಸವ ಪ್ರಯುಕ್ತ ಶ್ರೀ ಎಂ ಸಿ ಚಲಕ್ಕಿಯವರು ಹಾಡ್ಸವರು

ವಾರಾಣಾಸಿ— ಸ್ಥಳೀಯ ಹೋಟೆಲೊಂದರಲ್ಲಿ ಮೊನ್ನೆ ಜೊಂಬಾಯಿನಿಂದ ಬಂದಿದ್ದ ಗಂಡ, ಹೆಂಡತಿ, ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು ಸತ್ತು ಬಿದ್ದಿದ್ದರು : ಶವಗಳು ಪೋಸ್ಟ್‌ಮಾರ್ಟಮ್‌ಗೆ ಕಳುಹಿಸಲಾಯಿತು.

ನ್ಯೂಯಾರ್ಕ್— ಕಮ್ಯುನಿಸ್ಟ್ ಚೀನದೊಡನೆಯು ವಾಕಿಸ್ವತಂತ್ರ ನೀತಿಯನ್ನು ಅವೇರಿಕಾಕ್ಕೆ ತ್ಯೋಥಪುಟುಮಾಡಿದೆ ಎಂದು ಹೇಳಲಾಗಿದೆ.

ಜಪಾನ್— ಒಂದು ಅಂಬ್ಯುಲೆನ್ಸು ಕಾರು ಮೊನ್ನೆ ಇಳಿಗೆ 40 ಮೈಲಿ ದೂರದಲ್ಲಿ ನೂರು ಅಡಿ ಕೆಳಗಿನ ನಾಲೆಗೆ ಬಿದ್ದು ಮೂರು ಮಂದಿ ಕಿಕ್ಕರು.

ನವದೆಹಲಿ— ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರತ ಸರಕಾರವು ಹಿಂದಿ ಪ್ರಚಾರಕ್ಕೆ ಹೊಸ ಸ್ಕೀಂ ಜಾರಿಗೆ ತರಲು ಯೋಜಿಸಿದೆ ; ಹಿಂದೀ ಮಾಧ್ಯಮ ಸ್ಕೂಲು ಕಾಲೇಜುಗಳ ಸಂಖ್ಯೆ ಪಸೆ, ವಿದ್ಯಾರ್ಥಿಗಳಿಗೆ ಹಿಂದಿ ಪಠ್ಯಪುಸ್ತಕ ಕೊಡುವುದು, ಹಿಂದಿಯೇತರ ರಾಜ್ಯಗಳಲ್ಲಿ ಹಿಂದಿ ಪ್ರಚಾರಕ್ಕೆ ಗ್ರಂಥಾಲಯಗಳು ಇತ್ಯಾದಿ.

ನಾಗಾ ಡಕಾಯ್ತರು

ಇಂಫಾಲ್ (ಮಣಿಪುರಿ)— ಶಸ್ತ್ರಧಾರಿ ನಾಗಾ ದರೋಡೆಕೋರ ಗುಂಪೊಂದು ಅತ್ಯಾಧುನಿಕ ಆಯುಧಗಳೊಡನೆ ಬಂದು ಚಾಂಕೆಲ್ ಪೋಲೀಸು ಸ್ಟೇಷನ್ನಿನ ಮೇಲೆ ಧಾಳಿ ನಡೆಸಿದರು : ೀವ್ರ ಘರ್ಷಣಾನಂತರ ಅಡವಿಗೆ ವಾಪಸಾದರು — ಈಚೆಗೆ ಮಣಿಪುರದ 20 ಹೋಂ ಗಾರ್ಡ್ ಸದಸ್ಯರು 20 ಶಸ್ತ್ರಾಸ್ತ್ರ ಸಹಿತ ಮಧ್ಯರಾತ್ರಿ ಭೂಗತ ನಾಗಾಗಳೂಡನೆ ಸೇರಲು ಹೋದರು

ನವದೆಹಲಿ— ಯಾವ ವಿಚಾರಣೆಗೂ ತಾವು ಸಿದ್ಧವೆಂದು ಕಾಶ್ಮೀರದ ಮಾಜಿ ಪ್ರಧಾನಿ ಭಕ್ಷಿ ಹೇಳಿದರು.

ಸೈಪ್ರೋಡಿ— ಕೆಸಯಾದ 2 ಲಕ್ಷ ಮಂದಿ ಭಾರತೀಯರು ಅತಂತ್ರ ಸ್ಥಿತಿಯಲ್ಲಿದ್ದಾರೆ.

ನವದೆಹಲಿ — ಕಚ್ಚ್‌ನಿಂದ ಮಾತುಕತೆ ವಿಷಯದಲ್ಲಿ ಪಾಕಿಸ್ತಾನದಿಂದ ಯಾವ ವರ್ತಮಾನವೂ ಬಂದಿಲ್ಲ.

ನೀಚ ದೂಷಣೆ

ಹಿಂದೂ ತತ್ವಜ್ಞಾನ ವಿರುದ್ಧ

ಲಾರ್ಡ್, ಡಬ್ಲ್ಯೂ. ಸಿ, 2, ನಲ್ಲಿರುವ ಸುಪ್ರಸಿದ್ಧ ನ್ಯೂ ಅಟ್ಲಾಸ್ ಥಿಯೇಟರ್ ಕಟ್ಟಿಸಲು 1934 ನೇ ಇಸವಿ ಫೆಬ್ರವರಿ 19 ರಂದು ' ದಯೂಷರ ಕೋತಿಗಳು ' ಎಂಬ ನಾಟಕವನ್ನು ಅಭಿನಯಿಸಿ, ಹಿಂದೂ ತತ್ವಜ್ಞಾನವನ್ನು ಅವಹೇಳನವಾಗಿ ರೂಪಿಸಿ ಪರಿಹಾಸ ಮಾಡಿ ತುಂಬಾ ಅಪಮಾನ ಮಾಡಿದರೆಂಬ ವಿಷಯವನ್ನು ಕೇಳಿ ನಮ್ಮ ದೇಶಬಾಂಧವರು ಬಹು ನೊಂದುಕೊಳ್ಳದೇ ಇರರು;

ಈ ನಾಟಕಾಂಶವು ಹೀಗಿರುವುದು– ನಾಟಕದ ದೃಶ್ಯಭೂಮಿ (ಮಂಜು) ಹಿಮಾಲಯ ಕಪ್ಪಲಗುಡ್ಡಪ್ರದೇಶ : ಅಲ್ಲಿಗೆ ನವದೆಹಲಿಯಿಂದ ಬಂದ ಕೆಲ ಅಮೆರಿಕಾ ಡಾಕ್ಟರುಗಳ ಕಣ್ಣಿಗೆ ದೇವಾಲಯವೊಂದು ಅಕಸ್ಮಾತ್ತಾಗಿ ಬೀಳುವುದು : ಇದಿಂದ ನಾಟಕವು ಸಾಕಷ್ಟಾಗಿ, ಅನೇಕ ದೃಶ್ಯಗಳನ್ನೊಡಗೂಡಿ, ಪ್ರತಿಯೊಂದುಬಿಡುಗಡೆಯೂ ಹಿಂದೂಧರ್ಮವು ಕೇವಲ ಪ್ರತಿಮಾ ಪೂಜೆಯಿಂದೂ ಹಿಂದೂ ಧರ್ಮಗ್ರಂಥಗಳು ಮೂಢನಂಬಿಕೆಗಳಿಂದೂ ಅದುದರಿಂದಲೇ ಅಭಿವೃದ್ಧಿಯಾದ ಪ್ರತಿಷ್ಠಾಪಿತವಲ್ಲವೆಂದೂ ಸೂಚಿಸಲ್ಪಟ್ಟಿರುವುದು : ಹಿಂದೂ ತತ್ವದರ್ಶನವನ್ನು ಭೀಕರ ನಾಸ್ತಿಕವೆಂದೂ ಕರೆಯಲಾಗಿದೆ : ಮತ್ತು ಈ ಮತಾವಲಂಬಿಗಳಿಗೆ ಭಿಕ್ಷಾಪಾತ್ರೆ ಬಿಟ್ಟು ಇನ್ನೇನೂ ಗತಿಯಿಲ್ಲವೆಂದೂ ವರ್ಣಿಸಲ್ಪಟ್ಟಿರುತ್ತೆ.

ಪಾಶ್ಚಾತ್ಯ ಕ್ರೈಸ್ತಮತಾವಲಂಬಿಗಳು ದೇವರು ಜಾನಾಯಿತ ಪುತ್ರರು ಎಂದೂ, ಇವರೇ ಜಗತ್ತಿಗೆ ನವಜೀವನ ಪ್ರದಾನಮಾಡಬೇಕೆಂದೂ ಹೇಳಲಾಗಿರುವುದು.

ಈ ಅಮೇರಿಕಾ ಡಾಕ್ಟರುಗಳು ದೇವಾಲಯದ ಪವಿತ್ರ ಪ್ರಾಂಗಣವನ್ನೂ ಗರ್ಭಗುಡಿ ಪ್ರದೇಶವನ್ನೂ ಭ್ರಷ್ಟವಾಡುತ್ತಾ, ಭಗವಾನ್ ವಿಷ್ಣುವಿನ ಪ್ರತಿಮೆಯ ಮೇಲೆ ಕಾಲಿಟ್ಟುಕೊಂಡು ನಾವಾಯಿ ಸೀಸೆಗಳನ್ನು ಪ್ರತಿಮೆಯ ತಲೆಯ ಮೇಲೆ ಒಡೆಯುವರು : ಪಾಶ್ಚಾತ್ಯ ದರ್ಶಕವೃಂದದ ಚಿತ್ತರಂಜನೆಗಾಗಿ ಭಗವಾನ್ ಶಿವ ಮತ್ತು ಭಗವತಿ ಕಾಳಿಯನ್ನೂ ಯಥಾಸಾಧ್ಯ ಪರಿಹಾಸ ಮಾಡಿಯಾರು.

† ಇಲ್ಲಿಯೂ ನಡೆಯುತ್ತಿರುವ ಶ್ರೀಕ್ರೈಸ್ತಗಳಿಂದ ತುಂಬಿರುವ ಧಾರ್ಮಿಕ ಸಭೆಗಳಲ್ಲಿಯೂ ಕೂಡ ಹಿಂದೂಧರ್ಮದ ವಿರುದ್ಧ ಪ್ರಚಾರಪುಸ್ತಕಗಳು ಹಂಚಲಾಗುವ ಸುದ್ದಿದೊರಕಿದಾಗ ಈ ವಿಷಯವನ್ನು ಪರಾಮರ್ಶಿಸಬೇಕು.

ಇದು ಹಿಂದೂತತ್ವವನ್ನು ಹೇಗೆ ಅಪಮಾನಗೊಳಿಸುತ್ತಿರುವುದೆಂಬುದನ್ನೂ ಮತ್ತು ಈ ವಿಷಯವಾಗಿ ಯಾವ ಬಗೆಯ ವಿರೋಧದ ತಡೆಯುಡಿಯಿಸಿದಿರುವುದನ್ನು ತೋರಿಸುವುದೂ, ಹಿಂದೂಧರ್ಮವನ್ನು ಹೀನಗೊಳಿಸುವುದೂ ಕೇವಲ ಕ್ರೈಸ್ತ ಮಿಷನರಿಗಳ ಪ್ರಯತ್ನ ಕಾರ್ಯವಾಗಿರುತ್ತ : ಸ್ವಾಮಿ ವಿವೇಕಾನಂದರು ಇಂತಹ ಅಪಪ್ರಚಾರದ ಬಗ್ಗೆ ಎಷ್ಟೊಂದು ಮನಸೊಂದಿದ್ದರು ಮತ್ತು ಎಷ್ಟು ತೀಕ್ಷ್ಣವಾಗಿ ಧಿಕ್ಕರಿಸುತ್ತಿದ್ದರೆನ್ನುವುದು ಅವರ ಭಾಷಣ ಮತ್ತು ಗ್ರಂಥಗಳಿಂದ ಕಂಡುಬರುವುದು ; ಹಿಂದೂಗಳು ಅಜ್ಞಾನಿಗಳಾಗಿ ನಾಚಿಕೆಯಿಲ್ಲದವರಾಗಿ ನಮ್ಮ ಧರ್ಮದಲ್ಲಿಯೇ ಪರಿವರ್ತನೆಯು ಅವಶ್ಯಕವೆಂದು ಸುಮ್ಮನೇ ಕುಳಿತರೆ ಇಂತಹ ಅಘಾತಗಳು ಯಥಾವತ್ತಾಗಿ ಸಾಧಿಸುತ್ತಲೇ ಇರುವುವು. — Truth

---

ಶ್ರೀ ರಾಮಸೇವಾ ಸಮಿತಿ, ರಾಜಾರಾಂ ಅಗ್ರಹಾರ

— 20-4-65 ರ ಕಾರ್ಯಕ್ರಮ — ಶಯನೋತ್ಸವ

ವಿದ್ವಾನ್ ಜಿ ಆರ್ ವೆಂಕಟ್ರಾಮಾನುಜಾಚಾರ್ಯರವರ ಗಾಯನ ; ವಿದ್ವಾನ್ ಎಸ್ ಶಂಕರನಾರಾಯಣನವರ ಪಿಟೀಲು ; ವಿದ್ವಾನ್ ಸಿ ಕೆ ಸುಂದರಮೂರ್ತಿಯವರ ಕೊಳಲು : ವಿದ್ವಾನ್ ಎಂ ಎಸ್ ಶೇಷಪ್ಪನವರ ಮೃದಂಗ

21-4-65 — ಮಹಿಳೆಯರಿಗಾಗಿ ಕಾರ್ಯಕ್ರಮ

ವಿದುಷಿ ಸೌಭಾಗ್ಯವತಿ ಗೋವಿಂದರಾವ್‌ರವರು ಗಾಯನ : ವಿದ್ವಾನ್ ನಂಜುಂಡಿನವರ ಪಿಟೀಲು : ವಿದುಷಿ ಆರ್ ಶೈಲರವರ ಮೃದಂಗ

ವುಡ್‌ಲಾಂಡ್ಸ್ ಅಮೋಘ 4ನೇ ವಾರ

ಬೊಂಬಾಯಿ ಸಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯಮೋಘ ಹಿಂದಿ ಚಿತ್ರ ರತ್ನ

ಬಹು ಬೇಟಿ ★ Bahu Beti

ನಾಕ್ತ– ಅಶೋಕ್‌ಕುಮಾರ್, ವೈಜಯಂತಿಮಾಲ, ಜಾಯ್ ಮುಖರ್ಜಿ, ಮುಹಮ್ಮದ್

ಪ್ರತಿದಿನ 3 ಪ್ರದರ್ಶನಗಳು

ಆಪೇರಾ— ಜನಪ್ರಿಯ 3 ನೇ ವಾರ

ಅಮೋಘ ತಮಿಳು ಚಿತ್ರ — ದಿನ 3 ಆಟಗಳು

ಪೂಜೆಕ್ಕು ವಂದ ಮಲರ್

ತಾರಾಗಣ— ಜೆಮಿನಿ ಗಣೇಶ್, ಸಾವಿತ್ರಿ, ಪುನೋವಾಮ, ತುಕ್ಕುಂಡಮ್

SHAKTI SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Amaravapuram Mysore 4